Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 877/2023

ಸಿ ಡಬ್ಲ್ಯೂ-5
ಪಿ ಡಬ್ಲ್ಯೂ-3

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಮುತ್ತಣ್ಣ |
| ತಂದೆಯ ಹೆಸರು | ಃ- | ಪಾಂಡಪ್ಪ |
| ವಯಸ್ಸು | ಃ- | 25 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಹಾಲಭಾವಿ ತಾಂಡ |

**ದಿ.22-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ನನ್ನ ತಾಯಿ. ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-4 ನನ್ನ ಅಣ್ಣ. ಚಾ.ಸಾ-6 ನನ್ನ ತಂದೆ. ಚಾ.ಸಾ-7 ನನ್ನ ಚಿಕ್ಕಪ್ಪ. 1 ಮತ್ತು 2 ನೇ ಆರೋಪಿತರು ನನ್ನ ಮಾವಂದಿರು. 3 ನೇ ಆರೋಪಿ ನನ್ನ ಮಾವ. 4 ಮತ್ತು 5 ನೇ ಆರೋಪಿತರು ನನ್ನ ಅತ್ತೆಯರು. 6 ನೇ ಆರೋಪಿ ನನ್ನ ತಂಗಿ.

ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 9-00 ಗಂಟೆಗೆ ನಮ್ಮ ಮನೆಯ ಮುಂದೆ ನಾನು ಮತ್ತು ಚಾ.ಸಾ-1 ಮತ್ತು 4 ರವರು ಇದ್ದಾಗ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಬರಲೇ ಸೂಳೆ ಮಕ್ಕಳೆ ಮನೆಯಲ್ಲಿ ಏಕೆ ಕುಳಿತಿದ್ದೀರಿ ಹೊರಗೆ ಬಾ ಎಂದು ಬೈದರು. ಆಗ ನಾವು ಹೊರಗೆ ಬಂದಾಗ 1 ಮತ್ತು 2 ನೇ ಆರೋಪಿತರು ಚಾ.ಸಾ-1 ರವರ ಸೀರೆ ಹಿಡಿದು ಎಳೆದಾಡಿರುತ್ತಾರೆ. ಚಾ.ಸಾ-6 ರವರು ಜಗಳ ಬಿಡಿಸಲು ಬಂದಿರುತ್ತಾರೆ. ನನಗೆ 3 ನೇ ಆರೋಪಿ ಕಾಲಿನಿಂದ ಒದ್ದಿರುತ್ತಾನೆ ಮತ್ತು ಮೊಣಕಾಲಿಗೆ ಪೆಟ್ಟು ಬಿದ್ದಿರುತ್ತದೆ. ಚಾ.ಸಾ-4 ರವರಿಗೆ 4 ರಿಂದ 6 ನೇ ಆರೋಪಿತರು ಕೈಗಳಿಂದ ಹೊಡೆ-ಬಡೆ ಮಾಡಿರುತ್ತಾರೆ. ನಂತರ ಚಾ.ಸಾ-6 ಮತ್ತು 7 ರವರು ಬಿಡಿಸಿರುತ್ತಾರೆ. ನಂತರ ನಾವು ಆಸ್ಪತ್ರೆಗೆ ಹೋಗಿ ನಾನು ಮತ್ತು ಚಾ.ಸಾ-4 ರವರು ದಾಖಲಾಗಿರುತ್ತೇವೆ. ನಂತರ ಚಾ.ಸಾ-1 ರವರು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

**ಪಾಟೀ ಸವಾಲು ಶ್ರೀ ಹೆಚ್.ವೈ     ವಕೀಲರಿಂದ : -**

ಜಮೀನಿನ ಪಾಲಿನ ಸಂಬಂಧ ನಮಗೂ ಮತ್ತು ಆರೋಪಿತರ ನಡುವೆ ವೈ-ಮನಸ್ಸು ಇದೆ ಎಂದರೆ ಸರಿಯಲ್ಲ. ಜಮೀನು ಸಂಬಂಧ ಮಾನ್ಯ ಹಿರಿಯರ ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಡೆದಿದೆ ಎಂದರೆ ಸರಿ. ನಮ್ಮ ತಾಯಿಯ ಸೀರೆ ಹಿಡಿದು ಎಳೆದಾಡಿದಾಗ ಸೀರೆ ಹರಿದಿತ್ತು. ಸದರಿ ಸೀರೆಯನ್ನು ಪೋಲಿಸರಿಗೆ ತೋರಿಸಿರುವುದಿಲ್ಲ. ಜಗಳ ನಡೆದಾಗ ನಮ್ಮ ತಂದೆ ಹೊಲದಲ್ಲಿ ಇದ್ದರು. ನಮ್ಮ ಮನೆಯಿಂದ ಹೊಲ ಒಂದು ಕಿಲೋಮೀಟರ್ ದೂರ ಆಗುತ್ತದೆ. ನಮ್ಮ ತಂದೆ ಬರುವ ಹೊತ್ತಿಗೆ ಜಗಳ ಮುಗಿದಿತ್ತು ಎಂದರೆ ಸರಿಯಲ್ಲ. ಅವರೇ ಬಿಡಿಸಿರುತ್ತಾರೆ. ೩ನೇ ಆರೋಪಿ ನನಗೆ ಒದ್ದಾಗ ಬಲ ಮೊಣಕಾಲಿಗೆ ರಕ್ತಗಾಯವಾಗಿತ್ತು. ರಕ್ತವಾದ ಬಗ್ಗೆ ಪೋಲಿಸರಿಗೆ ಹೇಳಿರುತ್ತೇನೆ. 4 ರಿಂದ ೬ನೇ ಆರೋಪಿತರು ಚಅ.ಸಾ-4 ರವರಿಗೆ ಹೊಡೆದಾಗ ಅವರಿಗೆ ಗಾಯಗಳಾಗಿರಲಿಲ್ಲ ಪೆಟ್ಟಾಗಿತ್ತು. ಹೊಟ್ಟೆಗೆ ಹೊಡೆದಿರುತ್ತಾರೆ ಎಂದು ನಾನು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ಚಾ.ಸಾ-7 ನನ್ನ ಚಿಕ್ಕಪ್ಪ. ಚಾ.ಸಾ-7 ರವರು ಜಗಳ ನಡೆದಾಗ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಚಾ.ಸಾ-7 ಹಾಜರಿದ್ದ ಎಂದು ಹೇಳಿಕೆಯಲ್ಲಿ ಬರೆಸಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ನಮ್ಮ ಮನೆಯ ಮುಂದೆ ತೆಗೆದುಕೊಂಡಿರುತ್ತಾರೆ. ಆರೋಪಿತರು ಬಂದು ನನಗೆ ಮತ್ತು ನಮ್ಮ ತಾಯಿ ಮತ್ತು ಅಣ್ಣನಿಗೆ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಬಂದು ನಮಗೆ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ಸೀರೆ ಹಿಡಿದು ಎಳೆದಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಗಾಯ ಆಗಿಲ್ಲ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮತ್ತು ನಮ್ಮ ನಡುವೆ ಹೊಲದ ವೈಷಮ್ಯ ಇರುವದರಿಂದ ಅವರ ವಿರುದ್ದ ಸುಳ್ಳು ಕೇಸು ಹಾಕಿರುತ್ತೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.